ಹೀಗೆ ಮಾಡುವುದಿಲ್ಲ.'' ಈತನಿಗಾದರೋ ಗೀತಾ ದೂರವಾದರೆ ಸಾಕಾಗಿತ್ತು. ಮಿಕ್ಕವರ ಟೀಕೆ, ಬುದ್ಧಿವಾದ ಬೇಕಿರಲಿಲ್ಲ.

ಪ್ರಸಾದ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು, ಎರಡನೆಯ ರ್‍ಯಾಂಕ್ ಕೂಡ. ಮಿಕ್ಕವರು ಮಾಡುತ್ತಿದ್ದಂತೆ ವಿದೇಶಕ್ಕೆ ಹೋಗಿ ಅಲ್ಲಿ ಕೆಲಸ ನೋಡುವುದೆಂದು ಯೋಚಿಸತೊಡಗಿದರು. ಅವರ ಹೊಸ ಗೆಳತಿ ವೀಣಾ ಕಾಲೇಜಿನಲ್ಲಿ ಸಿಕ್ಕಿ ತನಗೆ ಅಮೆರಿಕಕ್ಕೆ ವೀಸಾ ದೊರಕಿದೆ. ಇನ್ನೇನು ಹೊರಟೆ ಎಂದು ನುಡಿದಳು. ಇವರ ಲೆಕ್ಕಾಚಾರ ಪ್ರಾರಂಭವಾಯಿತು. ಇವಳನ್ನು ಕಟ್ಟಿಕೊಂಡರೆ ನಾನೂ ಅಮೆರಿಕಕ್ಕೆ ಹೋಗಬಹುದು. ಸೂಕ್ತ ಹುಡುಗಿಯನ್ನು ಮದುವೆಯಾದಂತೆಯೂ ಆಯಿತು. ಗೆಳೆಯರ ಮೂಲಕ ಸಂದೇಶ ಕಳಿಸಿದರು. ಉತ್ತರ ಬರಲಿಲ್ಲ. ವೀಣಾ ಅಮೆರಿಕಕ್ಕೆ ಹೋಗಿದ್ದಾಯಿತು. ಅಲ್ಲಿಗೇ ಕಾಗದ ಬರೆದು ತಮ್ಮ ಅರ್ಜಿಯನ್ನು ಹಾಕಿಕೊಂಡರು. ಮೂರು ತಿಂಗಳ ನಂತರ ಬಂದಿತ್ತು ಉತ್ತರ, "ಕ್ಷಮಿಸಿ. ನಾನು ಮದುವೆಯ ಬಗ್ಗೆ ಯೋಚನೆ ಮಾಡಿಲ್ಲ". ಇದಾದ ಒಂದು ತಿಂಗಳಿನಲ್ಲಿಯೇ ಗೀತಾಳ ಮದುವೆಯೂ ನಡೆದುಹೋಯಿತು. ಅವಳ ಕೈಹಿಡಿದವನಾರು ಎತ್ತ ಎಂಬುದರ ಬಗ್ಗೆ ಅವರಿಗೆ ಯಾವ ಆಸಕ್ತಿಯೂ ಇರಲಿಲ್ಲ. ಬದಲಾಗಿ ಮನಸ್ಸಿಗೆ ತುಸು ನಿರಾಳ ಎನಿಸಿತು. ಈಗ ಮತ್ತೆ ನೆನಪಿಗೆ ಬಂತು ಅವನ ಹೆಸರು ನಾಗರಾಜ್. ಮುಂದೇನು ಯೋಚಿಸುತ್ತಾ ಅವರು ಅಲ್ಲಿ ಇಲ್ಲಿ ಕೆಲಸಗಳಿಗೆ ಅರ್ಜಿ ಗುಜರಾಯಿಸುತ್ತಾ ಹೋದರು. ಅಮೆರಿಕ, ಜರ್ಮನಿ, ಆಸ್ಟ್ರೇಲಿಯಾದ ಕಂಪನಿಗಳನ್ನು ಸಂಪರ್ಕಿಸಲಾರಂಭಿಸಿದರು.

ಪದವಿ ಸಿಕ್ಕ ತಕ್ಷಣ ತಾಯಿಯ ಬಲವಂತ ಪ್ರಾರಂಭವಾಯಿತು. "ಅವಳು ಅತ್ತ ಬೇರೆಯವನನ್ನ ಕಟ್ಟಿಕೊಂಡಿದ್ದು ಒಳ್ಳೆದೇ ಆಯಿತು. ನೀನು ಈಗ ಮದುವೆ ಆಗು, ನಾನು ಹುಡುಗಿಯರನ್ನ ನೋಡುತ್ತೇನೆ." ಸುಮ್ಮನಿದ್ದರು ಪ್ರಸಾದ್. ಅದು ಒಪ್ಪಿಗೆಯ ಮೌನ. ಇವರನ್ನು ಮದುವೆಯಾಗಲು ಸಿದ್ಧವಿದ್ದ ಹಲವಾರು ಹುಡುಗಿಯರ ಪೋಷಕರು ಮುಂದೆ ಬಂದರು. ಎಂಟು ಹತ್ತು ಹುಡುಗಿಯರನ್ನು ನೋಡಿದ್ದೂ ಆಯಿತು. ಆದರೆ ಯಾರೂ ಚೆನ್ನಾಗಿಯೂ ಇರಲಿಲ್ಲ, ಅವರೆಲ್ಲರಲ್ಲಿ ಹೇಳಿಕೊಳ್ಳುವಂತಹ ಯಾವ ಹೆಚ್ಚುಗಾರಿಕೆಯೂ ಇರಲಿಲ್ಲ. ಪ್ರಸಾದರಿಗೆ ಸ್ವಲ್ಪ ನಿರಾಶೆಯೇ ಆಯಿತು. ಆಗ ಒಂದು ಗುಟ್ಟು ಹೊರಬಂದಿತು. ಪ್ರಸಾದರಿಗೆ ಹೆಣ್ಣು ಕೊಡಲು ಹಲವಾರು ಜನ ನಿರಾಕರಿಸಿದ್ದರು. ಕಾರಣ ಅವರು ಒಬ್ಬ ಹುಡುಗಿಯನ್ನು ನಂಬಿಸಿ ಕೈ ಬಿಟ್ಟಿದ್ದರು. "ಇಂತಹ ಹುಡುಗನಿಗೆ ನಮ್ಮ ಹುಡುಗಿಯನ್ನು ಕೊಡುವುದೇ?" ಆದರೆ ಪರಿಸ್ಥಿತಿ ಕೈಬಿಟ್ಟು ಹೋಗಿರಲಿಲ್ಲ. ಪ್ರಸಾದರ ತಂದೆಯ ಗೆಳೆಯರೊಬ್ಬರ ಮೂಲಕ ಮೈಸೂರುವಾಸಿ ರೇವತಿಯ ಪರಿಚಯವಾಯಿತು. ಹುಡುಗಿ ಪದವೀಧರೆ, ಮಾತಿನಲ್ಲಿ ನಿಸ್ಸೀಮೆ. ಪ್ರಸಾದರ ತಾಯಿಗೆ ಪೂರ್ತಿ ಒಪ್ಪಿಗೆ ಇಲ್ಲದೇ ಹೋದರೂ ಮದುವೆ ನೆರವೇರಿತು. ಇದಾದ ಎರಡು ತಿಂಗಳಲ್ಲೇ ಆಸ್ಟ್ರೇಲಿಯಾದ ಸಿಡ್ನಿಯ ಬ್ಯಾಂಕ್ ಒಂದು ಇವರಿಗೆ ಭಾರಿ ಸಂಬಳದ ಕೆಲಸ ನೀಡಿ ಆಹ್ವಾನಿಸಿತು. ಇಬ್ಬರೂ ವಿಮಾನದ ಟಿಕೆಟ್ಟಿಗೆ ಬೇಕಾದ ಹಣವನ್ನು ಸಂಗ್ರಹಿಸಿ ಹೊರಟೇಬಿಟ್ಟರು.

ಒಜ್ಜೆ ಎನಿಸಿರಲಿಲ್ಲ ಇಟ್ಟ ಹೆಜ್ಜೆ. ಸಿಡ್ನಿಗೆ ಬಂದ ಕೆಲವೇ ತಿಂಗಳುಗಳಲ್ಲಿ ಅವರಿಗೆ ಆಸ್ಟ್ರೇಲಿಯಾದ ಪರ್ಮನೆಂಟ್ ರೆಸಿಡೆನ್ಸ್ (ಜೀವನ ಇಡೀ ಅಲ್ಲಿಯೇ ನೆಲೆಸಲು ಅನುಮತಿ) ದೊರೆಯಿತು. ರೇವತಿಯವರಿಗೂ ಇಲ್ಲಿಯ ಜಲಮಂಡಲಿಯಲ್ಲಿ ಕೆಲಸ ದೊರೆಯಿತು. ಸಾಕಷ್ಟು ಸಂಬಳ. ಇಬ್ಬರು ಮಕ್ಕಳಾದರು, ವಿವೇಕ್ ಮತ್ತು ವಾಣಿ. ಎರಡು ವರ್ಷ ಕಳೆಯುತ್ತಿದ್ದಂತೆಯೇ ಅವರಿಗೆ ಆಸ್ಟ್ರೇಲಿಯಾ ಪೌರತ್ವವೂ ದೊರಕಿತು. ಕಾಲಕ್ರಮೇಣ ಪ್ರಸಾದರ ತಂದೆ, ತಾಯಿ, ಅತ್ತೆ, ಮಾವ ಎಲ್ಲರೂ ಸಿಡ್ನಿಗೆ ಬಂದು ಹೋದರು. ಅವರದು ಆದರ್ಶ ಕುಟುಂಬ ಎನಿಸಿತು. ಈಗ ಪ್ರಸಾದರಿಗೆ 70 ವರ್ಷ